ಕರ್ನಾಟಕ ಸರ್ಕಾರದ

ಸಂಖ್ಯೆ:ಸಿಐ 17 ಎಂಜಿಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ,
ಬೆಂಗಳೂರು, ದಿನಾಂಕ: 21-03-2022

## ಅಧಿಸೂಚನೆ

Karnataka Regulation of Stone Crushers (Amendment) Rules, 2014 ನ್ನು ಇದರ ಅಧಿಕೃತ ಕನ್ನಡ ಭಾಷಾಂತರವನ್ನು The Karnataka Official Language Act, 1963 ರ ಪ್ರಕರಣ (2) ರ ಅಡಿಯಲ್ಲಿ ಸಾರ್ವಜನಿಕ ಮಾಹಿತಿಗಾಗಿ ಕರ್ನಾಟಕ ರಾಜ್ಯ ಪತ್ರದ ವಿಶೇಷ ಪತ್ರಿಕೆಯಲ್ಲಿ (ಭಾಗ ....) ಪ್ರಕಟಿಸಲು ಆದೇಶಿಸಲಾಗಿದೆ.

**ಅಧಿಸೂಚನೆ ಸಂಖ್ಯೆ ಸಿಐ 20 ಎಂಎಂಎನ್ 2014 ದಿನಾಂಕ: 06-02-2014 ಮತ್ತು ಸೇರ್ಪಡೆ ನಿಯಮಗಳು ದಿನಾಂಕ: 21-05-2014**

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 08)ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಗಳು, 2014ರ ಕರಡನ್ನು ದಿನಾಂಕ: 21.01.2014ರ ವಿಶೇಷ ಕರ್ನಾಟಕ ರಾಜ್ಯಪತ್ರದ ಭಾಗ-IV ಎ ರಲ್ಲಿ, ಅಧಿಸೂಚನೆ ಸಂಖ್ಯೆ: ಸಿಐ 20 ಎಂಎಂಎನ್ 2014, ದಿನಾಂಕ: 21.01.2014ರಲ್ಲಿ ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ.

ಸದರಿ ರಾಜ್ಯ ಪತ್ರವನ್ನು 21.01.2014 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಸದರಿ ಕರಡು ನಿಯಮಗಳ ಸಂಬಂಧದಲ್ಲಿ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ.

ಪ್ರಸ್ತುತ, ಸದರಿ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 08)ರ 18ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು, ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ (ತಿದ್ದುಪಡಿ) ನಿಯಮಗಳು, 2014 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 2ರ ತಿದ್ದುಪಡಿ.-** ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ನಿಯಮಗಳು, 2012 ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ) ನಿಯಮ 2ರಲ್ಲಿ,-

(i) ಉಪ-ನಿಯಮ (1)ರಲ್ಲಿ, (ಬಿ) ಖಂಡದ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) "ಕಂದಾಯ ಗ್ರಾಮ" ಎಂದರೆ, ಕಂದಾಯ ದಾಖಲೆಗಳ ಅನುಸಾರವಾಗಿ ಗ್ರಾಮ ಠಾಣಾದ ಪರಿಮಿತಿಗಳಲ್ಲಿ ಇರುವ ಗ್ರಾಮ ಮತ್ತು ಗ್ರಾಮ ಠಾಣಾ ಪರಿಮಿತಿ ಇಲ್ಲದಿರುವಲ್ಲಿ, ಈ ಅಧಿನಿಯಮ ಮತ್ತು ನಿಯಮಗಳ ಉದ್ದೇಶಕ್ಕಾಗಿ ಪ್ರಾದೇಶಿಕ ಲಕ್ಷಣಗಳು, ಭೌಗೋಳಿಕ ಲಕ್ಷಣಗಳು ಮತ್ತು ಪ್ರಾಕೃತಿಕ ಜೀವನ ನಡೆಸುವುದು ಇಂಥ ಅಂಶಗಳನ್ನು ಪರಿಗಣಿಸಿ ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ನಿರ್ಧರಿಸಬಹುದಾದಂತೆ ಮನೆಗಳ ಒಂದು ಸಮೂಹ ಮತ್ತು ಮನೆಗಳ ಸಂಖ್ಯೆ;

(ಬಿ1) "ಇತರೆ ರಸ್ತೆಗಳು" ಎಂದರೆ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಎತ್ತಿನಗಾಡಿ ರಸ್ತೆಗಳು, ಪಾದಚಾರಿ ಮಾರ್ಗ/ರಸ್ತೆಗಳು ಮತ್ತು ಕಲ್ಲುಪುಡಿ ಮಾಡುವ ಘಟಕಗಳನ್ನು ಸಂಪರ್ಕಿಸುವ ಮಾರ್ಗದ ರಸ್ತೆಗಳನ್ನು ಹೊರತುಪಡಿಸಿದ ಎಲ್ಲಾ ಇತರೆ ರಸ್ತೆಗಳು."

**3. ನಿಯಮ 3ರ ತಿದ್ದುಪಡಿ.-** ಸದರಿ ನಿಯಮಗಳ 3ನೇ ನಿಯಮದಲ್ಲಿ,-

(i) ಉಪ-ನಿಯಮ (1)ರಲ್ಲಿ, "ನಮೂನೆ-ಎ ರಲ್ಲಿ" ಎಂಬ ಪದಗಳ ತರುವಾಯ, "ಮತ್ತು ನಮೂನೆ-ಎ ರಲ್ಲಿ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕಗಳ ಸಂಬಂಧದಲ್ಲಿ ಮತ್ತು 6ನೇ ಪ್ರಕರಣಕ್ಕೆ ಅನುಗುಣವಾಗಿ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕಗಳ ಸ್ಥಳ ಅಥವಾ ಯಾವುದೇ ಇತರೆ ಸೂಕ್ತ ಪ್ರದೇಶವೆಂಬ ನಮೂನೆ ಎ ರಲ್ಲಿನ ಘೋಷಣೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಉಪ-ನಿಯಮ (2)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"(2) ನಮೂನೆ-ಎ ಅಥವಾ ನಮೂನೆ-ಎ1 ರಲ್ಲಿ ಲೈಸೆನ್ಸಿನ ಮಂಜೂರಾತಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅದನ್ನು ನಮೂನೆ-ಬಿ ರಲ್ಲಿ ಕಾನೂನು ಬದ್ಧವಾಗಿ ಪರಿಗಣಿಸತಕ್ಕದ್ದು. ಲೈಸೆನ್ಸ್ ನೀಡಿಕೆ ಪ್ರಾಧಿಕಾರವು ಅಧಿನಿಯಮದ 6ನೇ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂತೆ ಸ್ಥಳವನ್ನು ಜಂಟಿಯಾಗಿ ತಪಾಸಣೆ ಮಾಡುವಂತೆ ಮಾಡತಕ್ಕದ್ದು. ಮತ್ತು ಸುರಕ್ಷಿತ ವಲಯವೆಂದು ಅಧಿಸೂಚನೆ ಹೊರಡಿಸಿದ ನಂತರ, ಸುರಕ್ಷಿತ ವಲಯದ ಪಾಲನೆಯ ಪ್ರಮಾಣಪತ್ರವನ್ನು ನೀಡತಕ್ಕದ್ದು ಅಥವಾ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಅರ್ಜಿಯನ್ನು ತಿರಸ್ಕರಿಸತಕ್ಕದ್ದು. ಅನುಸರಣೆಯ ಪ್ರಮಾಣಪತ್ರವು ನಮೂನೆ-ಬಿ1 ರಲ್ಲಿ ಇರತಕ್ಕದ್ದು ಮತ್ತು ನಿರಾಕರಣೆಯ ಪ್ರಮಾಣಪತ್ರವು ನಮೂನೆ-ಡಿರಲ್ಲಿ ಇರತಕ್ಕದ್ದು.

**ವಿವರಣೆ:** ಈ ನಿಯಮದ ಉದ್ದೇಶಕ್ಕಾಗಿ, ನಿಷೇಧಿತ ಪ್ರದೇಶದೊಳಗೆ ಅನುಸರಣಾ ಪ್ರಮಾಣ ಪತ್ರವನ್ನು ನೀಡಿದ ತರುವಾಯ ನಿರ್ಮಾಣವಾದ ಯಾವುದೇ ಜನವಸತಿಯನ್ನು, ಶಾಲೆಗಳನ್ನು, ದೇವಸ್ಥಾನಗಳನ್ನು ಉಲ್ಲಂಘನೆ ಎಂಬುದಾಗಿ ಪರಿಗಣಿಸತಕ್ಕದ್ದಲ್ಲ."

**4. 3.ಎ, 3ಬಿ ಮತ್ತು 3ಸಿ ಹೊಸ ನಿಯಮಗಳ ಸೇರ್ಪಡೆ:-** ಸದರಿ ನಿಯಮಗಳ 3ನೇ ನಿಯಮದ ತರುವಾಯ, ಈ ಕೆಳಕಂಡ ಹೊಸ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:-

**"3ಎ. ಲೈಸೆನ್ಸಿಗಾಗಿ ಅರ್ಜಿಯ ರಿಜಿಸ್ಟರ್.-** ಸದಸ್ಯ ಕಾರ್ಯದರ್ಶಿಯು ಲೈಸೆನ್ಸಿಗಾಗಿ ಸ್ವೀಕರಿಸಿದ ಅರ್ಜಿಗಳ ಒಂದು ರಿಜಿಸ್ಟರ್‌ನ್ನು ನಮೂನೆ-ಎ2 ರಲ್ಲಿ ನಿರ್ವಹಿಸತಕ್ಕದ್ದು.

3ಬಿ. ಐಎಲ್‌ಎಂಎಸ್‌ನಲ್ಲಿ ಕಲ್ಲುಪುಡಿ ಮಾಡುವ/ಮರಳು ತಯಾರಿಕಾ ಘಟಕಗಳ **ನೋಂದಣಿ:-** ಲಘು ಖನಿಜಗಳನ್ನು ಕಚ್ಚಾ ವಸ್ತುಗಳನ್ನಾಗಿ ಬಳಕೆ ಮಾಡಿಕೊಳ್ಳಲು ಉದ್ದೇಶಿಸಿರುವಂತಹ ಪ್ರತಿಯೊಂದು ಕಲ್ಲುಪುಡಿ ಮಾಡುವ/ಮರಳು ತಯಾರಿಕಾ ಘಟಕಗಳು ಸಂದರ್ಭಾನುಸಾರವಾಗಿ ಸಂಬಂಧಪಟ್ಟ ಉಪನಿರ್ದೇಶಕರು/ಹಿರಿಯ ಭೂ ವಿಜ್ಞಾನಿ ಇವರ ಮುಖಾಂತರ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಮಗ್ರ ಗುತ್ತಿಗೆ ನಿರ್ವಹಣೆ ವ್ಯವಸ್ಥೆಯಲ್ಲಿ (ಐಎಲ್‌ಎಂಎಸ್) ನೋಂದಾಯಿಸತಕ್ಕದ್ದು ಮತ್ತು ಖನಿಜ ವಿಲೇ ಪರವಾನಗಿಗಳಿಗೆ ಯುಕ್ತವಾಗಿ ಒಳಪಡುವ ಖನಿಜಗಳನ್ನು ಸ್ವೀಕರಿಸತಕ್ಕದ್ದು ಮತ್ತು ಅವುಗಳನ್ನು ಪುಡಿ ಮಾತಕ್ಕದ್ದು ಮತ್ತು ಗಣಕೀಕೃತ ಖನಿಜ ವಿಲೇ ಪರವಾನಗಿಯೊಂದಿಗೆ ಪ್ರಯೋಜನಕಾರಿಯಾದ/ಸಂಸ್ಕರಿಸಿದ ಖನಿಜ ಉತ್ಪನ್ನಗಳನ್ನು ಸಾಗಣೆ ಮಾಡತಕ್ಕದ್ದು.

**3ಸಿ. ಕಲ್ಲುಪುಡಿ ಮಾಡುವ/ಮರಳು ತಯಾರಿಕಾ ಘಟಕಗಳಿಗೆ ಖನಿಜ ವಿಲೇ ಪರವಾನಗಿ:-**

(1) ಕಲ್ಲುಪುಡಿ ಮಾಡುವ ಲೈಸೆನ್ಸ್‌ದಾರನು, ಖನಿಜ ರಿಯಾಯಿತಿ ನಿಯಮಗಳ ಅನುಸಾರವಾಗಿ ನೀಡಲಾದ ಸಿಂಧುವಾದ ಖನಿಜ ವಿಲೇ ಪರವಾನಗಿ ಇಲ್ಲದೆ, ಆತನು ಆವರಣಗಳಲ್ಲಿ ಯಾವುದೇ ಖನಿಜವನ್ನು ಅಥವಾ ಸಂಸ್ಕರಿಸಿದ ಖನಿಜ ವಸ್ತುಗಳನ್ನು ಸ್ವೀಕರಿಸತಕ್ಕದ್ದಲ್ಲ/ಸ್ವೀಕರಿಸುವಂತೆ ಮಾಡತಕ್ಕದ್ದಲ್ಲ ಅಥವಾ ಸಂಗ್ರಹಿಸತಕ್ಕದ್ದಲ್ಲ/ಸಂಗ್ರಹಿಸುವಂತೆ ಮಾಡತಕ್ಕದ್ದಲ್ಲ.

(2) ಲೈಸೆನ್ಸುದಾರನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಮಗ್ರ ಗುತ್ತಿಗೆ ನಿರ್ವಹಣೆ ವ್ಯವಸ್ಥೆಯಲ್ಲಿ ವಿದ್ಯುನ್ಮಾನ ನಮೂನೆಯಲ್ಲಿ ಇರುವ ಪರವಾನಗಿಗಳೊಂದಿಗೆ ಸ್ವೀಕರಿಸಿದ ಖನಿಜಗಳಿಗೆ ಸ್ವೀಕೃತಿಯನ್ನು ನೀಡತಕ್ಕದ್ದು.

(3) ಕಲ್ಲುಪುಡಿ ಮಾಡುವ ಘಟಕಗಳಲ್ಲಿ ಪ್ರಯೋಜನಕಾರಿ ಖನಿಜ ಅಥವವಾ ಸಂಸ್ಕರಿಸಿದ ಯಾವುದೇ ಖನಿಜವನ್ನು ಸಾಗಣೆ ಮಾಡುವುದಕ್ಕೆ ಉದ್ದೇಶಿಸಿರುವ ಯಾರೇ ವ್ಯಕ್ತಿಯು, ಕರ್ನಾಟಕ ಲಘು ಖನಿಜ ರಿಯಾಯಿತಿ ನಿಯಮಗಳಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ ಹಿರಿಯ ಭೂವಿಜ್ಞಾನಿ/ಉಪ ನಿರ್ದೇಶಕರಿಗೆ ಖನಿಜ ವಿಲೇ ಬಿಡುಗಡೆ ಆದೇಶ (ಎಂಡಿಆರ್‌ಒ)ಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(4) ಸಂಬಂಧಪಟ್ಟ ಹಿರಿಯ ಭೂವಿಜ್ಞಾನಿ/ಉಪನಿರ್ದೇಶಕರು, ಕಲ್ಲುಪುಡಿ ಮಾಡುವ ಘಟಕಗಳಲ್ಲಿ ಸ್ವೀಕರಿಸಿದ ಖನಿಜ ವಸ್ತುವಿನ ಸಂಬಂಧದಲ್ಲಿ ರಾಯಧನವನ್ನು ಪಾವತಿಸಲಾಗಿದೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಪಾವತಿ ಮಾಡಿರುವ ಬಗ್ಗೆ ಮನವರಿಕೆಯಾದ ತರುವಾಯ, ಪ್ರತೀ ಖನಿಜ ವಿಲೇ ಬಿಡುಗಡೆ ಆದೇಶಕ್ಕೆ ಐವತ್ತು ರೂಪಾಯಿಗಳ ಕಾರ್ಯನಿರ್ವಹಣಾ ಶುಲ್ಕವನ್ನು ಸಂಗ್ರಹಿಸುವುದರ ಮೂಲಕ ಖನಿಜ ವಿಲೇ ಬಿಡುಗಡೆ ಆದೇಶ [MDRO]ವನ್ನು ನೀಡತಕ್ಕದ್ದು. ಮತ್ತು ತದನಂತರ ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ದಾರನು ಪರವಾನಗಿಗಳನ್ನು ಸೃಜಿಸತಕ್ಕದ್ದು. ಆದಾಗ್ಯೂ, ಖನಿಜ ವಿಲೇ ಬಿಡುಗಡೆ ಆದೇಶದ ಪ್ರಮಾಣವು, ಸಮಗ್ರ ಗುತ್ತಿಗೆ ನಿರ್ವಹಣೆ ವ್ಯವಸ್ಥೆಯಲ್ಲಿ ಪರಿಗಣಿಸಲ್ಪಟ್ಟ ಲಘು ಖನಿಜದ ಪ್ರಮಾಣವನ್ನು ಮೀರತಕ್ಕದ್ದಲ್ಲ.

(5) ಕಲ್ಲುಪುಡಿ ಮಾಡುವ ಘಟಕದ ಲೈಸೆನ್ಸ್‌ದಾರನಿಗೆ ಸೇರಿದ ಆವರಣದಲ್ಲಿ ರಾಯಧನದ ವ್ಯಾಪ್ತಿಗೆ ಒಳಪಡದಿರುವ ಯಾವುದೇ ಖನಿಜ ವಸ್ತು ಅಥವಾ ಅದರ ಸಂಸ್ಕರಿಸಿದ ಉತ್ಪನ್ನವು ಕಂಡುಬಂದರೆ, ಸಕ್ಷಮ ಪ್ರಾಧಿಕಾರವು ಈ ಬಗ್ಗೆ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ತರುವಾಯ, ಅಧಿನಿಯಮದ ಉಪಬಂಧಗಳ ಮೇರೆಗೆ ಕಠಿಣ ಕಾನೂನು ಕ್ರಮ ಜರುಗಿಸುವುದಕ್ಕೆ ಉಪಕ್ರಮಿಸತಕ್ಕದ್ದು."

**5. ನಿಯಮ 4ರ ತಿದ್ದುಪಡಿ.**- ಸದರಿ ನಿಯಮಗಳ 4ನೇ ನಿಯಮದಲ್ಲಿ,-

(i) ಉಪ-ನಿಯಮ (1)ರಲ್ಲಿ, "ಸಮಿತಿ" ಎಂಬ ಪದಗಳಿಗೆ ಬದಲಾಗಿ, "ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಉಪ-ನಿಯಮ (2)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:- "(2) ಪ್ರಾಧಿಕಾರವು, ನಮೂನೆ-ಜಿರಲ್ಲಿ ಕಲ್ಲುಪುಡಿ ಮಾಡುವ ಘಟಕಗಳ ಬಾಧಿತರು ಕ್ಲೇಮು ಮಾಡುವ ಮನವಿ/ಅರ್ಜಿಗಳು ಎಂಬ ಹೆಸರಿನಲ್ಲಿ ಕ್ಲೇಮು ಅರ್ಜಿಗಳ ವಿವರಗಳನ್ನು ಒಳಗೊಂಡಿರುವ ಕಲ್ಲುಪುಡಿ ಮಾಡುವ ಘಟಕಗಳ ಬಾಧಿತರ ಕ್ಲೇಮು ಮಾಡುವ ಅರ್ಜಿಗಳ ಒಂದು ರಿಜಿಸ್ಟರ್‌ನ್ನು ನಿರ್ವಹಿಸತಕ್ಕದ್ದು."

(iii) ಉಪ-ನಿಯಮ (5)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(5) ಸದಸ್ಯ ಕಾರ್ಯದರ್ಶಿಯು, ಸ್ವೀಕರಿಸಿದ ದೂರುಗಳನ್ನು ನಮೂನೆ-ಜಿ ರಿಜಿಸ್ಟರ್‌ನಲ್ಲಿ ದಾಖಲಿಸತಕ್ಕದ್ದು ಮತ್ತು ಪ್ರಾಧಿಕಾರದ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ವಿಚಾರಣೆಗೆ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಉಬಯ ಪಕ್ಷಕಾರರಿಗೂ ನೋಟೀಸ್ ನೀಡತಕ್ಕದ್ದು.

(5ಎ) ಅಧ್ಯಕ್ಷನು;

(1) ಕಲ್ಲುಪುಡಿ ಮಾಡುವ ಘಟಕಗಳ ಪ್ರತಿವಾದಿ/ಮಾಲೀಕ ಅಥವಾ ಅವನ ಪರವಾಗಿ ಯಾರೇ ಪ್ರತಿನಿಧಿಯು ವಿಚಾರಣೆಗೆ ಹಾಜರಾಗಲು ವಿಫಲನಾದಲ್ಲಿ, ಏಕಪಕ್ಷೀಯವಾಗಿ ಮತ್ತು ಗುಣಾವಗುಣಗಳ ಆಧಾರದ ಮೇಲೆ ವಿಷಯವನ್ನು ನಿರ್ಧರಿಸತಕ್ಕದ್ದು.

(2) ಕಲ್ಲುಪುಡಿ ಮಾಡುವ ಘಟಕಗಳ ಪ್ರತಿವಾದಿಗಳು/ಮಾಲೀಕನು ಹಾಜರಾಗಿ ಆಕ್ಷೇಪಣೆಗಳು, ಪ್ರತ್ಯುತ್ತರಗಳು, ಯಾವುದಾದರೂ ಇದ್ದರೆ, ಅವುಗಳನ್ನು ಸಲ್ಲಿಸಲು ಅನುಮತಿಸತಕ್ಕದ್ದು.

(3) ಅಫಿಡವಿಟ್‌ಗಳ ಮೂಲಕ ಲಿಖಿತದಲ್ಲಿ ಆಪಾದನೆಗಳನ್ನು ರುಜುವಾತು ಪಡಿಸಲು ಮತ್ತು ಪ್ರತಿವಾದಿ ಹೇಳಿಕೆಯನ್ನು ಸಲ್ಲಿಸಲು ಪಕ್ಷಕಾರರಿಬ್ಬರಿಗೂ ಅವಕಾಶ ನೀಡತಕ್ಕದ್ದು.

(4) ಅರ್ಜಿದಾರನು, ಯುಕ್ತ ಕಾರಣವಿಲ್ಲದೆ, ನಿಗದಿಪಡಿಸಿದ ದಿನಾಂಕದಂದು ಸಾಕ್ಷ್ಯವನ್ನು ಹಾಜರುಪಡಿಸಲು ವಿಫಲನಾದರೆ, ಅಂಥ ಅರ್ಜಿಯನ್ನು ವಜಾಗೊಳಿಸತಕ್ಕದ್ದು.

(5) ಅಫಿಡವಿಟ್‌ಗಳ ಮೂಲಕ ಸಾಕ್ಷಿದಾರರುಗಳನ್ನು ಮತ್ತು ಅವರ ಸಾಕ್ಷ್ಯವನ್ನು ಪರೀಕ್ಷಿಸಲು ಪಕ್ಷಕಾರರಿಗೆ ಅನುಮತಿ ನೀಡತಕ್ಕದ್ದು.

(6) ಎದುರು ಪಕ್ಷಕಾರನು ಪರಿಪ್ರಶ್ನೆಗಳ ಮೂಲಕ, ಇತರೆ ಪಕ್ಷಕಾರನನ್ನು ಅಥವಾ ಸಾಕ್ಷಿದಾರನನ್ನು ಪಾಟಿ ಸವಾಲು ಮಾಡಲು ಇಚ್ಛಿಸಿದರೆ, ಅವನಿಗೆ ಅನುಮತಿ ನೀಡತಕ್ಕದ್ದು. ಪ್ರಾಧಿಕಾರವು ಯಾರೇ ತಜ್ಞರ ಸೇವೆಯನ್ನು ಪಡೆದುಕೊಳ್ಳಬಹುದು ಮತ್ತು ಅವರಲ್ಲಿ ಯಾರಿಗಾದರೂ ಪ್ರಶ್ನೆಗಳನ್ನು ಕೇಳಬಹುದು.

(7) ಅರೆ-ನ್ಯಾಯಿಕ ವಿಧಾನದಲ್ಲಿ ವ್ಯವಹರಣೆಗಳನ್ನು ನಡೆಸತಕ್ಕದ್ದು.

(8) ಪಕ್ಷಕಾರರುಗಳ ಸುನಾವಣೆ ಮಾಡಬಹುದು ಅಥವಾ ಲಿಖಿತ ವಾದಗಳನ್ನು ಪಡೆದುಕೊಳ್ಳಬಹುದು ಮತ್ತು ವಾದ ಮಂಡನೆಗಳ ದಿನಾಂಕದಿಂದ 15 ದಿನಗಳೊಳಗೆ ಆದೇಶಗಳನ್ನು ಹೊರಡಿಸತಕ್ಕದ್ದು.

(9) ಆರ್‌ಪಿಎಡಿ ಮೂಲಕ ಸಂಬಂಧಿಸಿದ ಎಲ್ಲ ಪಕ್ಷಕಾರರುಗಳಿಗೆ ಹೊರಡಿಸಿದ ಆದೇಶಗಳನ್ನು ಕಳುಹಿಸುವ ಮೂಲಕ ತಿಳಿಸತಕ್ಕದ್ದು."

(iv) ಉಪ-ನಿಯಮ (7)ರಲ್ಲಿ, "ಅರ್ಜಿ" ಎಂಬ ಪದಗಳಿಗೆ ಬದಲಾಗಿ, "ಪ್ರಮಾಣಪತ್ರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) ಉಪ-ನಿಯಮ (8)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ.-

"8 ಪ್ರಾಧಿಕಾರವು, ಬಾಧಿತ ಕ್ಲೇಮು ಅರ್ಜಿಯಲ್ಲಿ ಅರ್ಜಿದಾರನಿಗೆ ನಷ್ಟ ಪರಿಹಾರ ಅಥವಾ ಪರಿಹಾರವನ್ನು ನೀಡುವಾಗ, ಬಾಧಿತನಾದವನು ಅನುಭವಿಸಿದ ಗಾಯ/ಹಾನಿಯ ಸ್ವರೂಪ, ಆತನ ವಯಸ್ಸು, ಉದ್ಯೋಗ, ಬಾಧಿತನು ಖರ್ಚು ಮಾಡಿದ ಅಥವಾ ಖರ್ಚು ಮಾಡಬೇಕಾದ ಹಣ, ಭವಿಷ್ಯದಲ್ಲಿ ಹಣ ಗಳಿಸುವ ಸಾಮರ್ಥ್ಯದಲ್ಲಿ ಆದ ನಷ್ಟ, ಆದಾಯ, ಯುಕ್ತ ಸಮಯದಲ್ಲಿ ಬಾಧಿತನ ಆದಾಯ ಮತ್ತು ಬಾಧಿತನು ಮೃತನಾದ ಸಂದರ್ಭದಲ್ಲಿ, ಆತನ ಕಾನೂನು ಸಮ್ಮತ ಪ್ರತಿನಿಧಿಗಳಿಗೆ ಆಗುವ ಹಣಕಾಸಿನ ಅಥವಾ ಆರ್ಥಿಕ ಬೆಂಬಲದ ನಷ್ಟ ಮುಂತಾದಂಥ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು."

(vi) ಉಪ-ನಿಯಮ (9)ರ ಬದಲಾಗಿ, ಈ ಕೆಳಕಂಡದ್ದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ.-

"(9) ಯಾವುದೇ ಬಾಧಿತ ಪರಿಹಾರ ಕ್ಲೇಮು ಅರ್ಜಿಯನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ 180 ದಿನಗಳೊಳಗೆ ವಿಲೇ ಮಾಡತಕ್ಕದ್ದು. ಪ್ರಾಧಿಕಾರವು, ಅವಶ್ಯವಿದ್ದರೆ, ಮಧ್ಯಕಾಲೀನ ಆದೇಶಗಳನ್ನು ಸಹ ಹೊರಡಿಸಬಹುದು."

(vii) ಉಪ-ನಿಯಮ (10)ನ್ನು ಬಿಟ್ಟುಬಿಡತಕ್ಕದ್ದು.

**6. ಎ1 ಮತ್ತು ಎ2 ಹೊಸ ನಮೂನೆಗಳ ಸೇರ್ಪಡೆ.-** ಸದರಿ ನಿಯಮಗಳ ಎ ನಮೂನೆಯ ತರುವಾಯ, ಈ ಕೆಳಕಂಡ ಹೊಸ ನಮೂನೆಗಳನ್ನು ಸೇರಿಸತಕ್ಕದ್ದು, ಎಂದರೆ:-

"ನಮೂನೆ-ಎ1

[3(1)ನೇ ನಿಯಮವನ್ನು ನೋಡಿ]

**ಘೋಷಣೆ**

ಇವರಿಂದ,

.....................

.....................

.....................

ಇವರಿಗೆ,

ಅಧ್ಯಕ್ಷರು,

ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸ್

ನೀಡಿಕೆ ಮತ್ತು ನಿಯಂತ್ರಣ ಪ್ರಾಧಿಕಾರ.

......................... ಜಿಲ್ಲೆ.

ಮಾನ್ಯರೇ,

ನಾನು/ನಾವು, ........... ಗ್ರಾಮ, ...........ತಾಲ್ಲೂಕು, ............ಜಿಲ್ಲೆಯ ........... ಸರ್ವೆ ನಂಬರ್‌ನಲ್ಲಿ ...............ಎಕರೆ ವಿಸ್ತೀರ್ಣದಲ್ಲಿ ಮೆ||........... ಇವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕಲ್ಲುಪುಡಿ ಮಾಡುವ ಘಟಕವು ........... ರಿಂದ ಮತ್ತು ಇದರೊಂದಿಗೆ ಹಾಜರುಪಡಿಸಿದ ದಸ್ತಾವೇಜುಗಳ ಆಧಾರದ ಮೇಲೆ ಅಸ್ತಿತ್ವದಲ್ಲಿರುತ್ತದೆ ಎಂದು ಈ ಮೂಲಕ ಘೋಷಿಸುತ್ತೇನೆ/ವೆ.

ಸುರಕ್ಷಾ ವಲಯವನ್ನಾಗಿ ಘೋಷಿಸುವುದಕ್ಕಾಗಿ ಅಧಿನಿಯಮದಲ್ಲಿ ಗೊತ್ತುಪಡಿಸಿದ ಷರತ್ತುಗಳನ್ನು ಪಾಲಿಸಲಾಗಿದೆ ಎಂದು ನಾನು ಪ್ರಮಾಣೀಕರಿಸುತ್ತೇನೆ. ಮತ್ತು ಸುರಕ್ಷಾ ವಲಯವೆಂದು ಘೋಷಿಸಬೇಕೆಂದು ಮತ್ತು ಈ ಬಗ್ಗೆ ನನಗೆ ಪ್ರಮಾಣಪತ್ರವನ್ನು ನೀಡಬೇಕೆಂದು ನಾನು ಕೋರುತ್ತೇನೆ;

ಅಥವಾ

ಸುರಕ್ಷಾ ವಲಯವನ್ನಾಗಿ ಘೋಷಿಸುವುದಕ್ಕಾಗಿ ಅಧಿನಿಯಮದಲ್ಲಿ ಗೊತ್ತುಪಡಿಸಿದ ಷರತ್ತುಗಳನ್ನು ಮೇಲೆ ನಮೂದಿಸಲಾದ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕದ ಸ್ಥಳದಲ್ಲಿ/ಭೂಮಿಯಲ್ಲಿ ಪಾಲಿಸಿರುವುದು ತೃಪ್ತಿಕರವಾಗಿರುವುದಿಲ್ಲ ಎಂದು ನಾನು ಪ್ರಮಾಣೀಕರಿಸುತ್ತೇನೆ. ಮತ್ತು ಆದ್ದರಿಂದ, ........... ಗ್ರಾಮದ, .......... ತಾಲ್ಲೂಕಿನ,......... ಜಿಲ್ಲೆಯ, ........ಎಕರೆಯ ವಿಸ್ತೀರ್ಣದಲ್ಲಿರುವ ...........ಸರ್ವೆ ನಂ.ನ ಭೂಮಿಯನ್ನು ಸುರಕ್ಷಾ ವಲಯವನ್ನಾಗಿ ಘೋಷಿಸುವ ಉದ್ದೇಶಕ್ಕಾಗಿ ಪರಿಗಣಿಸಬಹುದೆಂದು ಮತ್ತು ಈ ಬಗ್ಗೆ ಪ್ರಮಾಣಪತ್ರವನ್ನು ನೀಡಬಹುದೆಂದು ಪ್ರಸ್ತಾಪಿಸುತ್ತೇನೆ.

*ಅನ್ವಯವಾಗದೆ ಇರುವುದನ್ನು ಹೊಡೆದು ಹಾಕಿ.

ವಿವರಗಳು ಈ ಕೆಳಕಂಡಂತಿವೆ;

| ಕ್ರಮ ಸಂಖ್ಯೆ | ವಿವರಗಳು | ನಿಯಮಿಸಲಾದುದು | ಅಸ್ತಿತ್ವದಲ್ಲಿರುವುದು |
|---|---|---|---|
| 1. | ಸಮೀಪದ ರಾಷ್ಟ್ರೀಯ ಹೆದ್ದಾರಿಯಿಂದ ಇರುವ ಅಂತರ | 200 ಮೀಟರ್‌ಗಳು | |
| 2. | ಸಮೀಪದ ರಾಜ್ಯ ಹೆದ್ದಾರಿಯಿಂದ ಇರುವ ಅಂತರ | 200 ಮೀಟರ್‌ಗಳು | |
| 3. | ಸಮೀಪದ ಮುಖ್ಯ ಜಿಲ್ಲಾ ರಸ್ತೆ ಅಥವಾ ಇತರೆ ರಸ್ತೆಗಳಿಂದ ಇರುವ ಅಂತರ | 100 ಮೀಟರ್‌ಗಳು | |
| 4. | ಸಮೀಪದ<br>(i) ಕಂದಾಯ ಗ್ರಾಮ<br>(ii) ದೇವಸ್ಥಾನ<br>(iii) ಶಾಲೆಯಿಂದ ಇರುವ ಅಂತರ | <br>500 ಮೀಟರ್‌ಗಳು<br>500 ಮೀಟರ್‌ಗಳು<br>500 ಮೀಟರ್‌ಗಳು | |
| 4. | ಸ್ಥಳವು ನಗರ ಸಭೆಯ, ಮಹಾನಗರ ಪಾಲಿಕೆಯ, ಸಂದರ್ಭಾನುಸಾರ ಪುರಸಭೆಯ ವ್ಯಾಪ್ತಿಗಳ ಹೊರಗೆ ಇದೆಯೇ? | ಹೌದು | |
| 5. | ಅಧಿನಿಯಮ ಜಾರಿಯಾಗುವುದಕ್ಕೆ ಮುಂಚೆ ಯಾವುದೇ ಇತರೆ ಪ್ರಾಧಿಕಾರಗಳು ನೀಡಿದ ಲೈಸೆನ್ಸ್‌ನ ವಿವರಗಳು (ಯಾವುದಾದರೂ ಇದ್ದರೆ, ಪ್ರತಿಗಳನ್ನು ಲಗತ್ತಿಸಿ) | | |
| 6. | ಕಲ್ಲುಪುಡಿ ಮಾಡುವ ಘಟಕಗಳನ್ನು ಸ್ಥಾಪಿಸುವುದಕ್ಕಾಗಿ ಲಭ್ಯವಿರುವ ಭೂಮಿಯ ವಿಸ್ತೀರ್ಣ | ಕನಿಷ್ಠ 1 ಎಕರೆ | |
| 7. | ಅಧಿನಿಯಮದಲ್ಲಿ ಗೊತ್ತುಪಡಿಸಿದ ಷರತ್ತುಗಳು /ಅಧಿನಿಯಮದಲ್ಲಿ ಗೊತ್ತುಪಡಿಸಿದ ಷರತ್ತುಗಳ ಪಾಲನೆಗೆ ಪೂರಕವಾಗಿ ಲಗತ್ತಿಸಿದ ಯಾವುದೇ ಇತರೆ ದಸ್ತಾವೇಜುಗಳು ಪಾಲನೆಯಾಗದಿರುವುದಕ್ಕಾಗಿ ಕಾರಣಗಳು | | |
| 8. | ಷರಾಗಳು/ಯಾವುದೇ ಇತರೆ ಮಾಹಿತಿ | | |

<u>ಕಡ್ಡಾಯವಾಗಿ ಸಲ್ಲಿಸಬೇಕಾದ ಲಗತ್ತುಗಳು:</u>

(1) ಪ್ರಮುಖ ವಿವರಗಳನ್ನು ತೋರಿಸುವ ಅಸ್ತಿತ್ವದಲ್ಲಿರುವ ಕಲ್ಲುಪುಡಿ ಮಾಡುವ ಘಟಕದ/ಪ್ರಸ್ತಾವಿತ ಪ್ರದೇಶದ ಕಂದಾಯ ಪಾವತಿಯ ಅಥವಾ ಜಮೀನಿನ ನಕ್ಷೆ.

(2) ಅಸ್ತಿತ್ವದಲ್ಲಿರುವ/ಪ್ರಸ್ತಾವಿತ ಭೂಮಿಯ ಆರ್‌ಟಿಸಿ ಅಥವಾ ಸ್ವತ್ತಿನ ಉದ್ಧೃತ ಭಾಗ.

(3) ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದೇ ಪ್ರಾಧಿಕಾರಿಗಳು ಕಲ್ಲುಪುಡಿ ಮಾಡುವ ಘಟಕಕ್ಕಾಗಿ ನೀಡಿದ ಲೈಸೆನ್ಸ್/ಒಪ್ಪಿಗೆ ಪ್ರತಿ.

(4) ಭೂ ಮಾಲೀಕರು, ಯಾರಾದರೂ ಇದ್ದರೆ, ಅವರ ಸಮ್ಮತಿ ಪತ್ರ.

ದಿನಾಂಕ:
ಸ್ಥಳ:

ಅರ್ಜಿದಾರನ ಸಹಿ.

## ನಮೂನೆ-ಎ2

[ನಿಯಮ 3ಎ ಅನ್ನು ನೋಡಿ]

## ಲೈಸೆನ್ಸ್ ನೀಡಿಕೆಗಾಗಿ ಅರ್ಜಿಯ ರಿಜಿಸ್ಟರ್

| ಕ್ರಮ ಸಂಖ್ಯೆ | ಅರ್ಜಿದಾರನ ಹೆಸರು ಮತ್ತು ವಿಳಾಸ | ಕಲ್ಲುಪುಡಿ ಮಾಡುವ ಘಟಕವನ್ನು ಸ್ಥಾಪಿಸುವುದಕ್ಕಾಗಿ ಅರ್ಜಿ ಸಲ್ಲಿಸಿದ ಸ್ಥಳದ ವಿವರಗಳು | | | | | | ಅರ್ಜಿಯನ್ನು ಸ್ವೀಕರಿಸಿದ ದಿನಾಂಕ | ಈಗಾಗಲೇ ಇರುವ ಘಟಕವೇ/ಹೊಸ ಕಲ್ಲುಪುಡಿ ಮಾಡುವ ಘಟಕವೇ? | ಅನುಸರಣಾ ಪ್ರಮಾಣಪತ್ರವನ್ನು ನೀಡಿದ ದಿನಾಂಕ ಮತ್ತು ಅದರ ಸಂಖ್ಯೆ | ಲೈಸೆನ್ಸ್ ಸಂಖ್ಯೆ ಮತ್ತು ನೀಡಿದ ದಿನಾಂಕ |
|---|---|---|---|---|---|---|---|---|---|---|---|
| | | ಜಿಲ್ಲೆ | ತಾಲ್ಲೂಕು | ಗ್ರಾಮ | ಸರ್ವೆ ನಂ. | ವಿಸ್ತೀರ್ಣ | ಭೂಮಿಯ ವಿಧ | | | | |
| | | | | | | | | | | | |

7. **ಹೊಸ ನಮೂನೆ ಬಿ1 ರ ಸೇರ್ಪಡೆ.**– ಸದರಿ ನಿಯಮಗಳ ಬಿ ನಮೂನೆಯ ತರುವಾಯ, ಈ ಕೆಳಕಂಡ ಹೊಸ ನಮೂನೆ ಬಿ1 ಅನ್ನು ಸೇರಿಸತಕ್ಕದ್ದು, ಎಂದರೆ:–

"ನಮೂನೆ-ಬಿ1
[ನಿಯಮ 3(2) ಅನ್ನು ನೋಡಿ]
**ಕರ್ನಾಟಕ ಸರ್ಕಾರ**
**ಅನುಸರಣಾ ಪ್ರಮಾಣಪತ್ರ**

ಪ್ರಮಾಣಪತ್ರದ ಸಂಖ್ಯೆ............

...........ಗ್ರಾಮ, ...........ತಾಲ್ಲೂಕು, ...........ಜಿಲ್ಲೆಯ, ...........ಸರ್ವೆ ನಂ. ನಲ್ಲಿ ಶ್ರೀ/ಶ್ರೀಮತಿ/ಮೆ.........ರವರ ಹೆಸರಿನಲ್ಲಿ ಕಲ್ಲುಪುಡಿ ಮಾಡುವ ಘಟಕವನ್ನು ಸ್ಥಾಪಿಸುವುದಕ್ಕಾಗಿ ಪ್ರಸ್ತುತ ಇರುವ/ಪ್ರಸ್ತಾಪಿತ ಸ್ಥಳವನ್ನು/ಭೂಮಿಯನ್ನು ಸುರಕ್ಷಿತ ವಲಯವೆಂದು ಘೋಷಿಸಲಾಗಿದೆ ಮತ್ತು ಅಧಿನಿಯಮದಲ್ಲಿ ಗೊತ್ತುಪಡಿಸಿದ ಷರತ್ತುಗಳಿಗೆ ಅನುಗುಣವಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

ಈ ಪ್ರಮಾಣಪತ್ರದ ಧಾರಕನು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಘಟಕದ ಕಾರ್ಯಾಚರಣೆಗಾಗಿ ಸಮ್ಮತಿ (ಸಿಎಫ್‌ಒ)ಯನ್ನು ಪಡೆಯತಕ್ಕದ್ದು ಮತ್ತು ಅದನ್ನು ಲೈಸೆನ್ಸ್ ನೀಡಿಕೆ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ನಮೂನೆ ಸಿ ಯಲ್ಲಿ ಲೈಸೆನ್ಸ್ ಅನ್ನು ಪಡೆಯತಕ್ಕದ್ದು. ತರುವಾಯ ಆತನು/ಆಕೆಯು ಕಲ್ಲುಪುಡಿ ಮಾಡುವ ಘಟಕದ ಕಾರ್ಯಾಚರಣೆಯನ್ನು ಪ್ರಾರಂಭಿಸತಕ್ಕದ್ದು ಎಂದು ನಿರ್ದೇಶಿಸಲಾಗಿದೆ.

ಈ ಪ್ರಮಾಣಪತ್ರವನ್ನು ಸಿಎಫ್‌ಒ ಅನ್ನು ಪಡೆದುಕೊಳ್ಳುವುದಕ್ಕೆ ನೀಡಲಾಗಿದೆ ಮತ್ತು ಇದನ್ನು ಕಲ್ಲುಪುಡಿ ಮಾಡುವ ಘಟಕದ ಕಾರ್ಯಾಚರಣೆಯನ್ನು ಪ್ರಾರಂಭಿಸಲು ನೀಡಿರುವ ಲೈಸೆನ್ಸ್ ಎಂದು ಪರಿಗಣಿಸತಕ್ಕದ್ದಲ್ಲ.

ದಿನಾಂಕ:

ಸ್ಥಳ:

ಲೈಸೆನ್ಸ್ ನೀಡಿಕೆ ಪ್ರಾಧಿಕಾರ

..............ಜಿಲ್ಲೆ

**8. ಹೊಸ ನಮೂನೆ 'ಜಿ'ಯ ಸೇರ್ಪಡೆ.-** ಸದರಿ ನಿಯಮಗಳ ಎಫ್ ನಮೂನೆಯ ತರುವಾಯ, ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು, ಎಂದರೆ:-

"ನಮೂನೆ-ಜಿ

[ನಿಯಮ 4(2) ಅನ್ನು ನೋಡಿ]

## ಕಲ್ಲುಪುಡಿ ಮಾಡುವ ಘಟಕಗಳಿಂದ ಬಾಧಿತರಾದವರ ಕ್ಲೇಮು ಅರ್ಜಿಗಳ ರಿಜಿಸ್ಟರ್

| ಕ್ರಮ ಸಂಖ್ಯೆ | ಕಲ್ಲುಪುಡಿ ಮಾಡುವ ಘಟಕಕದಿಂದ ಬಾಧಿತರಾದವರ ಕ್ಲೇಮು ಅರ್ಜಿ ಸಂಖ್ಯೆ | ಕ್ಲೇಮು ಅರ್ಜಿದಾರನ ಹೆಸರು, ವಯಸ್ಸು, ವೃತ್ತಿ ಮತ್ತು ವಿಳಾಸ | ಸಂಕ್ಷಿಪ್ತವಾಗಿ ಕ್ಲೇಮಿನ ಸ್ವರೂಪ | ಪ್ರತಿವಾದಿಗಳ/ಕಲ್ಲುಪುಡಿ ಮಾಡುವ ಘಟಕದ ವಿವರಗಳು | ಅರ್ಜಿಯನ್ನು ಸ್ವೀಕರಿಸಿದ ದಿನಾಂಕ | ವಿಲೇ ಮಾಡಿದ ದಿನಾಂಕ | ಸಂಕ್ಷಿಪ್ತ ಆದೇಶ | ಅಧ್ಯಕ್ಷರು/ಸದಸ್ಯ-ಕಾರ್ಯದರ್ಶಿಯ ಸಹಿ |
|---|---|---|---|---|---|---|---|---|
| | | | | | | | | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ವೆಂಕಟೇಶ್)
ಪೀಠಾಧಿಕಾರಿ (Desk officer) (ಗಣಿಗಳು)
ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ.